## ರಣಥಂಬೋರ್ ಅಭಯಾರಣ್ಯದ ಮಚಲಿ ಎಂಬ ದುರಂತ ನಾಯಕಿ

ರಾಜಸ್ಥಾನದ ರಣಥಂಬೋರ್ ಅಭಯಾರಣ್ಯದಲ್ಲಿ ಬದುಕಿದ್ದ, T–16 ಎಂಬ ಸಂಕೇತದ ಮಚಲಿ ಎನ್ನುವ ಹೆಣ್ಣು ಹುಲಿಯನ್ನು 'ರಣಥಂಬೋರಿನ ರಾಣಿ' ಎಂದೇ ಕರೆಯಲಾಗುತ್ತಿತ್ತು. ಈಗಲೂ ರಣಥಂಬೋರಿನ ಪ್ರತಿ ಹೋಟೆಲ್ ಲಾಡ್ಜು ಮತ್ತು ಪ್ರಮುಖ ಸ್ಥಳಗಳಲ್ಲಿ ಈಕೆಯ ಕಣ್ಣುಗಳನ್ನು ಜನ ಪೋಸ್ಟರ್‌ಗಳಾಗಿ ರೂಪಿಸಿಕೊಂಡಿದ್ದಾರೆ. ಪ್ರಪಂಚದ ಇತಿಹಾಸದಲ್ಲೇ ಮಚಲಿ ಅತ್ಯಂತ ಜನಪ್ರಿಯ ಹುಲಿ ಎಂದು ಕೆಲವರು ವಾದಿಸುವುದುಂಟು. ಕಾರಣ ಈಕೆ $100 ಮಿಲಿಯನ್‌ಗಿಂತ ಹೆಚ್ಚು ಆದಾಯವನ್ನು ಪ್ರವಾಸೋದ್ಯಮಕ್ಕೆ ಹರಿಸಿದವಳು.

ಮಚಲಿಯ ಮುಖದ ಮೇಲೆ ಕಪ್ಪು ಪಟ್ಟೆಗಳಲ್ಲಿ ಮೂಡಿದ್ದ ಮೀನಿನ ಆಕಾರದ ಗುರುತು ಅವಳ ಸೌಂದರ್ಯಕ್ಕೆ ಮತ್ತೊಂದು ಗರಿ. 350 ಚದರ ಕಿಲೋ ಮೀಟರ್‌ಗಳಷ್ಟು ವಿಸ್ತಾರವಾದ ಮಚಲಿಯ ಸಾಮ್ರಾಜ್ಯವು ಐತಿಹಾಸಿಕ ರಣಥಂಬೋರ್ ಕೋಟೆ, ಸರೋವರ ಮತ್ತು ಸುತ್ತಮುತ್ತಲಿನ ಹುಲ್ಲುಗಾವಲುಗಳನ್ನು ವ್ಯಾಪಿಸಿತ್ತು. ಇವು ಇಲ್ಲಿನ ಮುಖ್ಯ ಪ್ರೇಕ್ಷಣೀಯ ಹಾಗೂ ಐತಿಹಾಸಿಕ ಸ್ಥಳಗಳಾದ ಕಾರಣಕ್ಕಾಗಿ, ಇವಳನ್ನು 'ರಣಥಂಬೋರ್ ರಾಣಿ' ಎಂದು ಘೋಷಿಸಲಾಯಿತು.

ರಾಜಸ್ಥಾನದ ಕಾಡಿನ ಹುಲಿ ಸಂತತಿಯನ್ನು ಹೆಚ್ಚಿಸುವಲ್ಲಿ ಈಕೆಯದು ನಿರ್ಣಾಯಕ ಪಾತ್ರ. ಏಳು ವರ್ಷಗಳ ಅವಧಿಯಲ್ಲಿ, ಮಚಲಿ ಹನ್ನೊಂದು ಮರಿಗಳಿಗೆ ಜನ್ಮ ನೀಡಿದಳು. ಇದೊಂದು ದಾಖಲೆ ಕೂಡ ಹೌದು. ನಂತರ ಮಕ್ಕಳನ್ನು ಯಶಸ್ವಿಯಾಗಿ ಸಾಕಿದಳು. ಇಲ್ಲಿ ಸಾಕುವುದು ಹೆರುವುದಕ್ಕಿಂತ ಹೆಚ್ಚು ಸಂಕಷ್ಟದ ಕೆಲಸ. ತನ್ನ ಮರಿಗಳನ್ನು ಕಾಪಾಡುವ ವಿಷಯದಲ್ಲಿ ಹೆಣ್ಣು ಹುಲಿ ಅನುಭವಿಸುವ ಯಾತನೆಯ ಬಗ್ಗೆ ಬರೆದರೆ ಕಾದಂಬರಿಯೇ ಆಗುತ್ತದೆ. ತುಂಬಾ ಸುದೀರ್ಘ ನೋವು ಅನುಭವಿಸಿ ಹೆಣ್ಣು ಹುಲಿ ಮಕ್ಕಳನ್ನು ರಕ್ಷಿಸುತ್ತದೆ. ತೀರಾ ವಿಚಿತ್ರ ಎಂದರೆ ಇವಕ್ಕೆ ಜನ್ಮ ಕೊಟ್ಟ ಗಂಡು ಹುಲಿಗಳೇ ಈ ಮರಿಗಳನ್ನು ಹೊಡೆದುಹಾಕುತ್ತವೆ. ಅಪ್ಪನೇ ಇಲ್ಲಿ ಸುಪಾರಿ ಕಿಲ್ಲರ್.

ಈಗ ರಾಜಸ್ಥಾನದ ರಣಥಂಬೋರ್ ಉದ್ಯಾನವನದಲ್ಲಿರುವ ಅರ್ಧದಷ್ಟು ಹುಲಿಗಳು ಇವಳ ವಂಶದ ಕುಡಿಗಳು ಎಂದು ಭಾವಿಸಲಾಗಿದೆ. 2008ರಲ್ಲಿ, ಈಕೆಯ ಎರಡು ಹೆಣ್ಣು ಮರಿಗಳನ್ನು ಸರಿಸ್ಕಾ ಹುಲಿ ಸಂರಕ್ಷಿತ ಪ್ರದೇಶಕ್ಕೆ ಸ್ಥಳಾಂತರಿಸಲಾಯಿತು. ಎರಡೂ ಹೆಣ್ಣುಗಳು ಸರಿಸ್ಕಾ ಪ್ರದೇಶದಲ್ಲಿ ಹುಲಿಸಂಖ್ಯೆಯ ಪುನರುಜ್ಜೀವನಕ್ಕೆ ಅಪಾರ ಕೊಡುಗೆ ನೀಡಿದವು.

2003ರ ಬರಗಾಲದ ಸಮಯದಲ್ಲಿ ಹಸಿವಿನಿಂದ ಕಂಗೆಟ್ಟ ಮಚಲಿ ಹನ್ನೊಂದು ಅಡಿ ಉದ್ದದ ಜವುಗು ಮೊಸಳೆಯನ್ನು ಕೊಂದು ಸುದ್ದಿ ಮಾಡಿದಳು. ಮೊಸಳೆಯನ್ನು ಹುಲಿ ಬೇಟೆಯಾಡಿದ ಸಂಗತಿ ಒಂದು ದಾಖಲೆಯಾಗಿ ಉಳಿಯಿತು. ಆದರೆ ಮಚಲಿ ಈ ಕಷ್ಟಕರ ಸಾಹಸ ಮಾಡಲು ಹೋಗಿ ಅಮೂಲ್ಯವಾದ ಎರಡು ಕೋರೆಹಲ್ಲುಗಳನ್ನು ಕಳೆದುಕೊಂಡಳು. ಹುಲಿ ಹಲ್ಲು ಕಳಕೊಂಡರೆ ಅದರ ಆಯುಸ್ಸು ಮುಗಿದಂತೆ. ಹುಲಿಯ ನಿಜಜೀವ ಇರುವುದೇ ಅದರ ಹಲ್ಲು ಮತ್ತು ತೀಕ್ಷ್ಣ ಉಗುರುಗಳಲ್ಲಿ. ಈ ದುಸ್ಸಾಹಸ ಮಾಡಿದ ಮಚಲಿ ತನ್ನ ಕೊನೆಯ ದಿನಗಳನ್ನು ಅತ್ಯಂತ ದುಃಖಭರಿತ ಮಾಡಿಕೊಂಡಳು. ಊಟವಿಲ್ಲದೆ ನರಳಿ ಮೂಳೆ ಚಕ್ಕಳೆಯಾಗಿ ಕೊರಗಿ ಸಾವನ್ನಪ್ಪಿದಳು.

ಇವಳ ಈ ಸಾಹಸ ಅನುಸರಿಸಿ, 'ಲೇಡಿ ಆಫ್ ಲೇಕ್ಸ್', 'ಕ್ರೊಕೊಡೈಲ್ ಕಿಲ್ಲರ್' ಮತ್ತು 'ಟೈಗರ್ ಕ್ವೀನ್' ಸೇರಿದಂತೆ ಹಲವಾರು ಸಾಕ್ಷ್ಯಚಿತ್ರಗಳು ತಯಾರಾದವು. 'ಬಿ.ಬಿ.ಸಿ. ಅರ್ಥ್', 'ನ್ಯಾಷನಲ್ ಜಿಯಾಗ್ರಫಿಕ್ ವೈಲ್ಡ್' ಮತ್ತು 'ಅನಿಮಲ್ ಪ್ಲಾನೆಟ್'ನಂತಹ ಅಂತರರಾಷ್ಟ್ರೀಯ ಸಂಸ್ಥೆಗಳು ಈಕೆಯ ಬಗ್ಗೆ ಸಾಕಷ್ಟು ಅಧ್ಯಯನ ಮಾಡುವ ಮೊದಲೇ ಈಕೆ ಹೊರಟು ಹೋದಳು.

## ಜಿಮ್ ಕಾರ್ಬೆಟ್ ಕಾಡಿನ ಪಾರೋ

ಕಾರ್ಬೆಟ್ ಹುಲಿ ಸಂರಕ್ಷಿತ ಪ್ರದೇಶದ ಬಗ್ಗೆ ಮಾತನಾಡುವ ಎಲ್ಲರೂ ಪಾರೋ ಹೆಸರನ್ನು ತಪ್ಪದೆ ಉಲ್ಲೇಖಿಸುತ್ತಾರೆ. ಪಾರೋ ಅಥವಾ

**ಹುಲಿಗಳು ಮನುಷ್ಯರನ್ನು ಕೊಲ್ಲಬೇಕು ಎಂಬ ಗುಪ್ತ ಕಾರ್ಯಸೂಚಿಯನ್ನೇನು ಹೊಂದಿಲ್ಲ. ಅವು, ಕಾಡಿನಲ್ಲಿ ಸಿಗುವ ಸೊಗಸಾದ ಊಟದ ಬೇಟೆಗಳನ್ನು ಬಿಟ್ಟು ನಾರುವ ಮನುಷ್ಯನನ್ನು ಯಾಕೆ ಸಂಚು ಮಾಡಿ ಕೊಲ್ಲಬೇಕು? ಆದರೆ ಅನಿವಾರ್ಯವಾಗಿ ಏರ್ಪಡುತ್ತಿರುವ ಮಾನವ–ಹುಲಿಗಳ ಮುಖಾಮುಖಿ ಸಂಘರ್ಷವಾಗಿ ಅನೇಕ ಸಾವು ನೋವಿಗೆ ಕಾರಣವಾಗುತ್ತಿದೆ.**



ಜಿಮ್ ಕಾರ್ಬೆಟ್ ಕಾಡಿನ ಪಾರೋ